<u>**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**</u>
<u>**ಅಫಜಲಪೂರ**</u>

ಸಿಸಿ ನಂ.228/2014

ಚಾಸಾ-1 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 10.10.2018

| | | |
|---|---|---|
| ಹೆಸರು | ಃ | ರಮೇಶ ಮಾಳಗೆ |
| ತಂದೆ ಹೆಸರು | ಃ | ಸಾತಲಿಂಗಪ್ಪ |
| ವಯಸ್ಸು | ಃ | 40-ವರ್ಷ |
| ಉದ್ಯೋಗ | ಃ | ಆಡಳಿತಾಧಿಕಾರಿ ರೇಣುಕಾ ಶುಗರ್ಸ |
| ವಾಸಸ್ಥಳ | ಃ | ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

9 ವರ್ಷಗಳಿಂದ ರೇಣುಕಾ ಶುಗರ್ಸನಲ್ಲಿ ಆಡಳಿತಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದೇನೆ. ದಿಃ 01.01.2012 ರಂದು ರೇಣುಕಾ ಶುಗರ್ಸನಲ್ಲಿ ಮದ್ಯ ರಾತ್ರಿ ಕಬ್ಬಿನ ಟ್ರ್ಯಾಕ್ಟರಗಳ ಸರದಿ ವಿಚಾರವಾಗಿ ಬಾಯಿ ಮಾತಿನ ತಕರಾರು ಆಗಿದ್ದು, ಈ ಕುರಿತು ಪೋಲಿಸರಿಗೆ ತಿಳಿಸಲು ಅವರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ಹೇಳಿಕೆ ಪಿರ್ಯಾದಿಯನ್ನು ಮತ್ತು ಅದರ ಮೇಲಿನ ತನ್ನ ಸಾಕ್ಷಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-5 ಮತ್ತು ನಿಪಿ-5ಎ ಎಂದು ಗುರುತಿಸಲಾಯಿತು. ಆರೋಪಿತರು ಯಾವುದೇ ಹಾನಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ನ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ಘಟನೆ ದಿವಸ ಆರೋಪಿತರು ಸಹ ದಾಂದಲೇ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಜೀವಬೆದರಿಕೆ ಹಾಕಿ ಕಲ್ಲು ತೂರಾಟ ನಡೆಸಿ ಕಂಪ್ಯೂಟರ ಹಾಗೂ ತೂಕದ ಇಂಡಿಕೇಟರ ಹಾನಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಕುರಿತು ಪ್ರಕರಣ ದಾಖಲಿಸಿದ ನಂತರ ದಿನಾಂಕ 03.01.2012 ರಂದು ನಾನು ತೊರಿಸಿದ ಘಟನಾ ಸ್ಥಳವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಮುಂಜಾನೆ 8.15 ರಿಂದ 9.15 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೂಲ ಪ್ರಕರಣದಲ್ಲಿ ಆರೋಪಿತರೊಂದಿಗೆ ರಾಜಿ ಮಾಡಿಕೊಂಡ ಕಾರಣ ವಿಭಜಿತ ಪ್ರಕರಣವಾದ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.
ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ